228

## ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/71/2014-15 ದಿ:10-06-2016

ವಾದಿಗಳು ವಿರುದ್ಧ ಪ್ರತಿವಾದಿಗಳು

1.ಟಿ.ಎಲ್.ಅಬ್ದುಲ್‌ರಹೀಮ್ ತಂದೆ ಟಿ.ಎಲ್.ಅಬ್ದುಲ್ ಶುಕೂರ್‌ಸಾಬ್. ನಂ:219-ಬಿ.ಮಹಬೂಬ್‌ಕಾಲೋನಿ. ಸಿಂಧನೂರು.

2.ಎಸ್.ಪರವೀನ್‌ಬೇಗಂ ಗಂಡ ಎಸ್. ಅಶ್ರಫ್‌ಅಲಿ. ಸಿರುಗುಪ್ಪ, ನಗರ. ಸಿರುಗುಪ್ಪ (ತಾ).

ಸುನ್ನೀಮಾ ಗಂಡ ಲೇಟ್ ಗಫೂರ್‌ಸಾಬ್ 1 ನೇ ವಾರ್ಡ್ ಸಿರುಗುಪ್ಪ, ನಗರ.

**ದಾವಾ ಜಮೀನಿನ ವಿವರ**

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಸಿರುಗುಪ್ಪ | 404/ಎ/3 | 0-60 | ಟಿಬಿಪಿ-ಸ,ನೀ. |

ಪೀಠಿಕೆ;-

ಸಿರುಗುಪ್ಪ ತಾಲೂಕು ಸಿರುಗುಪ್ಪ ಗ್ರಾಮದ ಸ,ನಂ.404/ಎ/3 ವಿ:4-73 ಎಕ್ರೆಯಲ್ಲಿ ವಿ:0-60 ಎಕ್ರೆ ಜಮೀನಿಗೆ ರದ್ದುಪಡಿಸಲಾಗದ ಸಾಮಾನ್ಯ ಅಧಿಕಾರ ಪತ್ರ ಸಂಖ್ಯೆ: 249/2010-11 ದಿ:20-08-2010 ರ ಪ್ರಕಾರ ಹಾಲಿ ಪಟ್ಟಾದಾರರಾದ **ಎಸ್.ಪರವೀನ್‌ಬೇಗಂ** ಇವರಿಂದ ಟಿ.ಎಲ್.ಅಬ್ದುಲ್‌ರಹೀಮ್ ತಂದೆ ಟಿ.ಎಲ್.ಅಬ್ದುಲ್ ಶುಕೂರ್‌ಸಾಬ್ ಇವರು ಹೊಂದಿರುವ ಅಧಿಕಾರದ ಮೇರೆಗೆ, ನೋಂದಣಿ ಕ್ರಯಪತ್ರ ಸಂಖ್ಯೆ:5455/2014-15 ದಿ:23-12-2014 ರ ಪ್ರಕಾರ ಜಿಪಿಎ ಹೋಲ್ಡರ್ ಆಗಿರುವ ವಾದಿ (1) ರವರು ಅಂದರೆ **ಟಿ.ಎಲ್.ಅಬ್ದುಲ್ ರಹೀಮ್ ತಂದೆ ಟಿ.ಎಲ್.ಅಬ್ದುಲ್ ಶುಕೂರ್‌ಸಾಬ್** ರವರೇ ತಮ್ಮ ಹೆಸರಿಗೆ ಕ್ರಯ ನೋಂದಣಿ ಹೊಂದಿದ್ದು, ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಸಿರುಗುಪ್ಪ ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ **ಸುನ್ನೀಮಾ ಗಂಡ ಲೇಟ್ ಗಫೂರ್‌ಸಾಬ್** ಇವರು "ಪ್ರಸ್ತಾಪಿತ ದಾವಾ ಆಸ್ತಿ ತಮ್ಮ ಪಿತ್ರಾರ್ಜಿತ ಆಸ್ತಿಯಾಗಿದ್ದು, ಸದ್ರಿ ಜಮೀನಿನಲ್ಲಿ ತಮಗೂ ಭಾಗ ಇದೆ ಎಂದು, ಅಲ್ಲದೇ ದಾವಾ ಆಸ್ತಿಯ ಮೇಲೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ಡಬ್ಲ್ಯೂ.ಪಿ.ನಂ:106062/2014 ದಾವೆ ಹೂಡಿದ್ದು, ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು" ದಿನಾಂಕ:31-01-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರು ಸದ್ರಿ ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಹ,ಬ,ಸಂಖ್ಯೆ:125/2014-15 ದಿ:10-02-2015 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

226

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:25-04-2015 ರಿಂದ 10-05-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ಮತ್ತು ಇವರ ಪರ ವಕೀಲರು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ಪ್ರತಿವಾದಿ ಪರ ವಕೀಲರ ಹೇಳಿಕೆ ಪ್ರಕಾರ ದಾವಾ ಆಸ್ತಿಯ ಸಂಭಂಧವಾಗಿ, ಈ ಹಿಂದೆ ಮಾನ್ಯ ಜೆ.ಎಂ.ಎಫ್.ಸಿ. ಸಿರುಗುಪ್ಪ ನ್ಯಾಯಾಲಯ ಸಿರುಗುಪ್ಪ ಅಸಲು ದಾವಾ ಸಂಖ್ಯೆ:43/2012 ದಿ:20-07-2013 ರ ರಾಜೀ ಅನು ಸಂಧಾನ ಡಿಕ್ರಿಯಲ್ಲಿನ ತೀರ್ಪಿಗೆ ಅಸಮ್ಮತಿ ವ್ಯಕ್ತಪಡಿಸಿ, ಈ ನ್ಯಾಯಾಲಯ ಪ್ರಕರಣದ ಪ್ರತಿವಾದಿ ಸುನ್ನೀಮಾ ಇವರು ಇತರೆ (3) ಮೂರು ಜನ ಸೇರಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ಡಬ್ಲ್ಯೂ.ಪಿ.ನಂ:106062/2014 ರ ದಾವೆ ಹೂಡಿದ್ದು, ವಿಚಾರಣೆ ಇನ್ನೂ ಬಾಕಿ ಇದ್ದು, ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿದರು. ಈ ಬಗ್ಗೆ ನ್ಯಾಯಾಲಯವು ತಡೆಯಾಜ್ಞೆ ನೀಡಿದ್ದಲ್ಲಿ ಅಥವಾ ಯಾವುದೇ ಆದೇಶ ನೀಡಿದಲ್ಲಿ ದಾಖಲೆ ಹಾಜರುಪಡಿಸಲು ತಿಳಿಸಲಾಯಿತು. ಆದರೆ ಯಾವುದೇ ಪೂರಕ ದಾಖಲೆಗಳನ್ನು ಪ್ರತಿವಾದಿ ಪರ ಹಾಜರುಪಡಿಸಲು ವಿಫಲರಾಗಿರುತ್ತಾರೆ.

ವಾದಿಗಳ ಪರ ವಕೀಲರು ಲಿಖಿತ ವಾದ ಮಂಡಿಸಿ, ದಾವಾ ಆಸ್ತಿಗೆ ಪ್ರತಿವಾದಿ ಶ್ರೀಮತಿ ಸುನ್ನೀಮಾ ಇವರು ಉದ್ದೇಶಪೂರ್ವಕವಾಗಿ ತಕರಾರು ಸಲ್ಲಿಸಿದ್ದು, ಈ ಜಮೀನಿಗೆ ಯಾವುದೇ ರೀತಿಯ ಹಕ್ಕು, ಅಧಿಕಾರ ಇರುವುದಿಲ್ಲ. ಮಾನ್ಯರ ನ್ಯಾಯಾಲಯದಲ್ಲಿ ಪ್ರತಿವಾದಿ ತಕರಾರು ಅರ್ಜಿಯಲ್ಲಿ ನಮೂದಿಸಿರುವಂತೆ, ಯಾವುದೇ ಸಂಗತಿ ಸತ್ಯದಿಂದ ಕೂಡಿರುವುದಿಲ್ಲ. ಏಕೆಂದರೆ ಪ್ರತಿವಾದಿ ತಮ್ಮ ಅರ್ಜಿಯಲ್ಲಿ ನಮೂದಿಸಿರುವ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ಡಬ್ಲ್ಯೂ.ಪಿ.ನಂ:106062/2014 ರಲ್ಲಿ ಯಾವುದೇ ತಡೆಯಾಜ್ಞೆ ಆದೇಶ ನೀಡಿರುವುದಿಲ್ಲ. ಮತ್ತು ಸದ್ರಿ ರಿಟ್ ಅರ್ಜಿಯ ಸಂಪೂರ್ಣ ವಿಚಾರಣೆ ಮುಗಿದು ದಿನಾಂಕ:20-04-2016 ರಂದು ಮಾನ್ಯ ನ್ಯಾಯಾಲಯವು ರಿಟ್ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಅಲ್ಲದೇ ಈ ಹಿಂದೆ ಮಾನ್ಯರ ನ್ಯಾಯಾಲಯದಲ್ಲಿ ದಿನಾಂಕ: 10-08-2015 ಮತ್ತು 21-03-2016 ರಂದು ಕ್ರಯದಾರನು ತನ್ನ ಹೆಸರಿಗೆ ಕ್ರಯಪತ್ರದಂತೆ ಹಕ್ಕು ಬದಲಾವಣೆ ಮಾಡಲು ಕೋರಿ ಮಂಡಿಸಿದ ಲಿಖಿತ ವಾದವನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿ, ಪ್ರತಿವಾದಿಯ ತಕರಾರು ಅರ್ಜಿಯನ್ನು ವಜಾಗೊಳಿಸಿ, ನೋಂದಣಿ ಕ್ರಯಪತ್ರದಂತೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರವರ ನ್ಯಾಯಾಲಯ

(279)

ಆದ್ದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128, 129 ರ ಅಡಿ, ಹಾಗೂ ವಾದಿಗಳ ಪರ ಹಾಜರುಪಡಿಸಿದ ಲಿಖಿತ ವಾದ ಮತ್ತು ದಾಖಲೆಗಳ ಆಧಾರದ ಮೇರೆಗೆ, ಮತ್ತು ಪ್ರತಿವಾದಿ ತಿಳಿಸಿದ ರಿಟ್ ಅರ್ಜಿಯು ವಜಾಗೊಂಡಿರುವುದರಿಂದ, ಸಿರುಗುಪ್ಪ ತಾಲೂಕು ನೋಂದಣಿ ಕ್ರಯಪತ್ರ ಸಂಖ್ಯೆ:5455/2014-15 ದಿ:23-12-2014 ರ ಪ್ರಕಾರ ಕ್ರಯ ಹೊಂದಿರುವ ಟಿ.ಎಲ್.ಅಬ್ದುಲ್ ರಹೀಮ್ ತಂದೆ ಟಿ.ಎಲ್.ಅಬ್ದುಲ್ ಶುಕೂರ್‌ಸಾಬ್ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/71/2014-15** **ದಿ:10-06-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಸಿರುಗುಪ್ಪ ಗ್ರಾಮದ ಸ,ನಂ.404/ಎ/3 ವಿ:4-73 ಎಕ್ರೆಯಲ್ಲಿ ವಿ:0-60 ಎಕ್ರೆ ಜಮೀನಿಗೆ ರದ್ದುಪಡಿಸಲಾಗದ ಸಾಮಾನ್ಯ ಅಧಿಕಾರ ಪತ್ರ ಸಂಖ್ಯೆ: 249/2010-11 ದಿ:20-08-2010 ರ ಪ್ರಕಾರ ಹಾಲಿ ಪಟ್ಟಾದಾರರಾದ **ಎಸ್.ಪರವೀನ್‌ಬೇಗಂ** ಇವರಿಂದ ಟಿ.ಎಲ್.ಅಬ್ದುಲ್‌ರಹೀಮ್ ತಂದೆ ಟಿ.ಎಲ್.ಅಬ್ದುಲ್ ಶುಕೂರ್‌ಸಾಬ್ ಇವರು ಹೊಂದಿರುವ ಅಧಿಕಾರದ ಮೇರೆಗೆ, ನೋಂದಣಿ ಕ್ರಯಪತ್ರ ಸಂಖ್ಯೆ:5455/2014-15 ದಿ:23-12-2014 ರ ಪ್ರಕಾರ ಜಿಪಿಎ ಹೋಲ್ಡರ್ ಆಗಿರುವ ವಾದಿ (1) ರವರು ಅಂದರೆ **ಟಿ.ಎಲ್.ಅಬ್ದುಲ್ ರಹೀಮ್ ತಂದೆ ಟಿ.ಎಲ್.ಅಬ್ದುಲ್ ಶುಕೂರ್‌ಸಾಬ್** ರವರೇ ತಮ್ಮ ಹೆಸರಿಗೆ ಕ್ರಯ ನೋಂದಣಿ ಹೊಂದಿದ್ದು, ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:10-06-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

**ತಹಶೀಲ್ದಾರರು,ಸಿರುಗುಪ್ಪ**

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ

ಕರ್ನಾಟಕ ಸರ್ಕಾರ ★ ಸಿರುಗುಪ್ಪ ★ ತಹಶೀಲ್ದಾರರ ನ್ಯಾಯಾಲಯ